ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೨೨ನೇ ಜೂನ್ ೧೯೯೦, ಆಷಾಡ ೧, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯.೦೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಜಾತಿ ಪ್ರಮಾಣಪತ್ರ ನೀಡುವ ಬಗ್ಗೆ

೬೩೨. ಡಾ. ಆರ್. ಬಿ. ಚೌಧರಿ (ಸಿಂಧಗಿ):— ಮಾನ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಟೋಕ್ರಿ ಕೋಳಿ, ಕೋಳಿಡೋರ್, ಹಾಗೂ ಮಹದೇವ ಕೋಳಿ ಜನಾಂಗದವರು ಕರ್ನಾಟಕದಲ್ಲಿ ಇರುವರೇ ?

ಆ) ಇದ್ದರೆ, ಕರ್ನಾಟಕದ ಯಾವ ಭಾಗದಲ್ಲಿ ಇರುವರು ?

ಇ) ಹುನಗುಂದದಲ್ಲಿ ಕೋಳಿ ಸಮಾಜದ ಜನರಿಗೆ ಸುಮಾರು ೮ ತಿಂಗಳಿಂದ ಪರಿಶಿಷ್ಟ ಜಾತಿಯ (ಎಸ್‌ಟಿ) ಪ್ರಮಾಣ ಪತ್ರವನ್ನು ಕೊಡುವುದನ್ನು ನಿಲ್ಲಿಸಿದ್ದರಿಂದ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ವಿಜಾಪುರ ಜಿಲ್ಲೆಯ ಅಧಿಕಾರಿಗಳು ಕೋಳಿ ಸಮಾಜದ ಜನರಿಗೆ ಕೆಲವು ಸಲ ಪ್ರಮಾಣ ಪತ್ರ ಕೊಡುವುದು ಕೆಲವು ಸಲ ನಿಲ್ಲಿಸುವುದು ನಡೆಸಿದ್ದಾರೆ. ಇದು ಈ ಜನರ ಸಂವಿಧಾನ ಬದ್ಧವಾದ ಹಕ್ಕನ್ನು ಮೊಟಕುಗೊಳಿಸಿದಂತಲ್ಲವೇ? ಇದರ ಸಲುವಾಗಿ ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನೆ, ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು) (ಸಮಾಜ ಕಲ್ಯಾಣ, ಗಣಿ, ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ).—

ಅ) ಹೌದು.

ಆ) ಕರ್ನಾಟಕದ ಉತ್ತರ ಭಾಗದಲ್ಲಿರುವವರು.

ಇ) ಹೌದು.

ಈ) ಕೋಳಿ ಜಾತಿಯು ಪರಿಶಿಷ್ಟ/ಜಾತಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿರುವುದಿಲ್ಲ. ಆದ್ದರಿಂದ, ಈ ಮೊದಲು ಈ ಜನಾಂಗದವರಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರವನ್ನು ಬಿಜಾಪುರ ಜಿಲ್ಲೆಯ ಅಧಿಕಾರಿಗಳು ನೀಡಿದ್ದರೆ ಅದು ಸರಿಯಲ್ಲ.

ಡಾ. ಆರ್. ಬಿ. ಚೌಧರಿ.— ಮಾನ್ಯ ಮಂತ್ರಿಗಳು ಟೋಕ್ರಿ ಕೋಳಿ, ಕೋಳಿಡೋರ್ ಜಾತಿಯವರು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರ ಪಟ್ಟಿಯಲ್ಲಿ ಸೇರಿರುವುದಿಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಹೊಲಿ ಜಾತಿಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಕ್ರಮಾಂಕ ೨೨ರಲ್ಲಿ ಪರಿಶಿಷ್ಟದ ವರ್ಗಕ್ಕೆ ಸೇರಿದೆ ಎಂದು ಇದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ — ಮಾನ್ಯ ಅಧ್ಯಕ್ಷರೇ, ಪೆಡ್ಡೂಲ್ ಟ್ರೈಬ್ ಪಾರ್ಟ್-೬ ಕರ್ನಾಟಕಕ್ಕೆ ಸಂಬಂಧಪಟ್ಟಂತಹ ಐಟಂ ೨೨ರಲ್ಲಿ ಟೋಕ್ರಿ ಕೋಳಿ, ಕೋಳಿದವರ್ ಕೊಯ್ಗಾ ಕೊಳಚಾ ಎಂಬ ಈ ಹೆಸರುಗಳ ಜಾತಿಗಳು ಮಾತ್ರ ನಮೂದಿಸಲ್ಪಟ್ಟಿವೆ. ನೀವು ಕೇಳಿದ ಕೋಳಿ ಅಂಬಿಗೆಯ ವರ್ಗದ ಜನರು ಈ ೨೨ರ ಲಿಸ್ಟ್‌ನಲ್ಲಿ ಇಲ್ಲ. ಆದುದರಿಂದ ಟೋಕ್ರಿ ಕೋಳಿ, ಕೋಳಿದವರ್ ಜನಾಂಗದವರು ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಂದು ಈಗಲೂ ಕೂಡ ಬಿಜಾಪುರ ಜಿಲ್ಲೆಯಲ್ಲಿ ಸರ್ಟಿಫಿಕೇಟ್ ಕೊಡುತ್ತಿದ್ದಾರೆ. ಅದಕ್ಕೆ ಆತಂಕವೇನೂ ಇಲ್ಲ.

ಡಾ ಆರ್. ಬಿ. ಚೌಧರಿ — ಸಮಾಜ ಕಲ್ಯಾಣ ಇಲಾಖೆಯವರು ದಿನಾಂಕ ೨೨-೩-೧೯೬೦ರಲ್ಲಿ ಬಿಜಾಪುರದ ಜಿಲ್ಲಾಧಿಕಾರಿಗಳಿಗೆ ಒಂದು ಆದೇಶವನ್ನು ಕೊಟ್ಟರೂ ಕೂಡ ಈ ವರ್ಗದವರಿಗೆ ಜಾತಿ ಪ್ರಮಾಣ ಪತ್ರವನ್ನು ಕೊಡುತ್ತಿಲ್ಲ. ಕೆಲವೊಂದು ಅಧಿಕಾರಿಗಳು ಕರ್ನಾಟಕದಲ್ಲಿ ಈ ಜಾತಿಯ ಜನರು ಇರುವುದಿಲ್ಲವೆಂದು ಸಾಧಿಸುತ್ತಿದ್ದಾರೆ. ಅವರ ಸಲುವಾಗಿ ತಾವು ಏನು ಕ್ರಮ ಜರುಗಿಸುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ — ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರತಕ್ಕಂತಹ ಲಿಸ್ಟ್‌ನಲ್ಲಿನ ಕ್ರಮಾಂಕ ೨೨ರಲ್ಲಿ ಕೋಳಿಡೋರ್, ಮತ್ತು ಟೋಕ್ರಿ ಕೋಳಿ ಜನಾಂಗದವರು ಇರುವುದರಿಂದ ಇದಕ್ಕೆ ಸರ್ಟಿಫಿಕೇಟ್ ಅನ್ನು ಯಾರಾದರೂ ಕೊಡದಿದ್ದರೆ ಅದನ್ನು ಕೊಡಬೇಕೆಂದು ನಾವು ಪುನಃ ಸ್ಪಷ್ಟೀಕರಿಸಬಹುದು. ಅದಕ್ಕೂ ತೊಂದರೆಯಿಲ್ಲ. ಆದರೆ ಸಂಬಂಧಪಡದೇ ಇರತಕ್ಕಂತಹವರಿಗೆ ಪ್ರಮಾಣಪತ್ರವನ್ನು ನೀಡಲು ಮಾತ್ರ ಆಗುವುದಿಲ್ಲ. ಆದರೆ ಒಂದು ವೇಳೆ ಸಂಬಂಧಪಟ್ಟವರಿಗೆ ಸರ್ಟಿಫಿಕೇಟ್ ಕೊಡಲು ನಿರಾಕರಿಸಲ್ಪಟ್ಟಿದ್ದರೆ, ಅದನ್ನು ಸರಿಪಡಿಸಲು ನಾವು ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇವೆ.

ಶ್ರೀ ಪಿ. ಜಿ ಆರ್. ಸಿಂಧ್ಯ — ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಮೇಲೆ ಮಾತನಾಡುವಾಗ ಇದರ ಬಗ್ಗೆ ಮಾತನಾಡಬೇಕೆಂದಿದ್ದೆ. ಹೊಸದಾಗಿ ತಹಸೀಲ್ದಾರ್‌ರಾಗಿ ಬಂದಂತಹ ಸಂದರ್ಭದಲ್ಲಿ ಅಥವಾ ಡೆಪ್ಯೂಟಿ ಕಮಿಷನರ್ ಸಮಾಜ ಕಲ್ಯಾಣ ಇಲಾಖೆಯಿಂದ ಕಳಿಸಿತಕ್ಕಂಥ ಗೈಡ್‌ಲೈನ್ಸ್ ಅನ್ನು ಸರಿಯಾಗಿ ಓದಿಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಕೆಲವು ವಿಶಿಷ್ಟವಾದ ವರ್ಗದ ಜನರಿಗೆ ಬಹಳ ತೊಂದರೆಯಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯವರು ಸರ್ಕ್ಯುಲರ್ ಕಳಿಸಿದರೂ ಅವರು ಸಹಕರಿಸುತ್ತಿಲ್ಲ, ಅದಕ್ಕೋಸ್ಕರ ಅವರು ಧರಣಿ ಉಪವಾಸ ಮಾಡುತ್ತಿದ್ದಾರೆ ಎಂಬ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ತಾವು ಜಿಲ್ಲಾಧಿಕಾರಿಗಳ ಸಮ್ಮೇಳನದ ಸಂದರ್ಭದಲ್ಲಾಗಲಿ, ಬೇರೆ ಸಂದರ್ಭದಲ್ಲಾಗಲಿ, ಬೆಳಗಾಂ, ಬಿಜಾಪುರ, ಗುಲ್ಬರ್ಗಾ, ಬೀದರ್ ಈ ೪-೫ ಜಿಲ್ಲೆಗಳಲ್ಲಿ ಇಂಥ ಸಮಸ್ಯೆಗಳು ಇರುವುದರಿಂದ ನಿರ್ದಿಷ್ಟವಾಗಿ, ನಿಖರವಾದ ಸೂಚನೆಯನ್ನು ಸರ್ಕಾರ ಕೊಡುವುದಕ್ಕೆ ಸಾಧ್ಯವೆ ? ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ — ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧಪಕ್ಷದ ಮಾನ್ಯ ಉಪನಾಯಕರು ಕೊಟ್ಟಂಥ ಸೂಚನೆಯನ್ನು ನಾನು ಸ್ವೀಕರಿಸುತ್ತೇನೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿಚಾರದಲ್ಲಿ ನಮ್ಮ ಅಧಿಕಾರಿಗಳು ಏನಾದರೂ ಅಶಿಷ್ಟ ಧೋರಣೆಯನ್ನು ಅಥವಾ ಔದಾಸೀನ ಭಾವನೆಯನ್ನು ಹೊಂದಿದ್ದಲ್ಲಿ ಬೇಕಾದರೆ ಜಿಲ್ಲಾಧಿಕಾರಿಗಳ ಅಥವಾ ವಿಭಾಗಾಧಿಕಾರಿಗಳ ಸಮ್ಮೇಳನದಲ್ಲಿ ಸ್ಪಷ್ಟಪಡಿಸಬಹುದು. ಯಾರು ಸರ್ಟಿಫಿಕೇಟ್ ಕೊಡುತ್ತಾರೆ ಅಂಥವರಿಗೆ ಸೂಚನೆ ಕೊಡುವುದಕ್ಕೆ ಸಾಧ್ಯವಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

(ಚುಕ್ಕೆ ಪ್ರಶ್ನೆ. ೯೪೧, ೭೭೯, ೯೯೮, ೭೭೭ ೭೭೮ ಮಾನ್ಯ ಸದಸ್ಯರುಗಳು ಗೈರುಹಾಜರು)

ವಿದ್ಯುಚ್ಛಕ್ತಿ (ಕಾರ್ಯನಿರ್ವಾಹಕ) ಅಭಿಯಂತರರ ಕಛೇರಿ ಸ್ಥಾಪಿಸುವ ಬಗ್ಗೆ

*೫೯೨. ಶ್ರೀ ಬಿ. ಹೆಚ್. ಯಂಕಾನಾಯ್ಕ್ (ಹರಪನಹಳ್ಳಿ).— ಮಾನ್ಯ ಕೈಗಾರಿಕಾ, ಇಂಧನ ಮತ್ತು ಪಕ್ಷ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿಯಲ್ಲಿ ಈಗ ಎರಡು ಎಕ್ಸಿಕ್ಯೂಟೀವ್ ಇಂಜಿನಿಯರ್ (ವಿದ್ಯುತ್ ಕಛೇರಿಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಈ ಭಾಗದ ಬಹು ಹಿಂದಿನ ಬೇಡಿಕೆಯಾದ ಎಕ್ಸಿಕ್ಯೂಟೀವ್ ಇಂಜಿನಿಯರ್ ಕಛೇರಿಯನ್ನು ಬಳ್ಳಾರಿಯಿಂದ ಹರಪನಹಳ್ಳಿಗೆ ವರ್ಗಾಯಿಸುವ ಬಗ್ಗೆ ಸರ್ಕಾರಕ್ಕೆ ಅನೇಕ ಸಲ ಪ್ರಶ್ನೆ ಮೂಲಕ ಒತ್ತಾಯಪಡಿಸಿರುವುದು ನಿಜವೆ ?